
# ಸಂತ ಏಕನಾಥ ಮಹಾರಾಜ್

ರತ್ನಾಕರ ಹ. ಕುಲಕರ್ಣಿ



## ಜನನ ಮತ್ತು ಬಾಲ್ಯ

**ಸಂ**ಸ್ಕೃತ ಹಾಗೂ ವೇದವಿದ್ಯೆಗಳಿಗೆ ಪ್ರಸಿದ್ಧವಾದ ಮಹಾರಾಷ್ಟ್ರದ ಪೈಠಣವೆಂಬ ಪಟ್ಟಣದಲ್ಲಿ, ಭಾನುದಾಸನೆಂಬ ವಿಠಲನ ಮಹಾನ್ ಭಕ್ತನಿದ್ದನು. ಈ ವಂಶದಲ್ಲಿಯೇ ೧೫೩೮ ರಲ್ಲಿ ರುಕ್ಮಿಣಿಬಾಯಿ ಮತ್ತು ಸೂರ್ಯಾಜಿ ಪಂತರೆಂಬ ದಂಪತಿಗಳಿಗೆ, ಏಕನಾಥ ಮಹಾರಾಜರು ಅವತರಿಸಿದರು. ಇವರು ಜನಿಸಿದ ಕೆಲವೇ ದಿವಸಗಳಲ್ಲಿ ಇವರ ತಂದೆತಾಯಿಗಳು ತೀರಿಕೊಂಡರು. ಇವರ ಅಜ್ಜನಾದ ಚಕ್ರಪಾಣಿ, ಮಗುವಿನ ಪಾಲನೆ ಮಾಡಬೇಕಾಯಿತು. ಚಕ್ರಪಾಣಿಯ ತಂದೆಯೇ ಭಾನುದಾಸರು.

ಏಕನಾಥನು ಜನ್ಮದಿಂದಲೇ ಸಾತ್ವಿಕ ಸ್ವಭಾವದವನಾಗಿದ್ದು, ಕುಶಾಗ್ರಬುದ್ಧಿಯುಳ್ಳವನಾಗಿದ್ದರಿಂದ, ಸಂಸ್ಕೃತ ಶ್ಲೋಕಗಳನ್ನು ಶೀಘ್ರವೇ ಗ್ರಹಿಸುತ್ತಿದ್ದನು. ಆರನೆಯ ವಯಸ್ಸಿನಲ್ಲಿ ಉಪನಯನ ವಾಯಿತು. ತದನಂತರ ಇವನ ಅಜ್ಜ ಚಕ್ರಪಾಣಿಯು ಒಬ್ಬ ಒಳ್ಳೆಯ ಸಂಸ್ಕೃತ ಪಂಡಿತನನ್ನು ಗೊತ್ತುಮಾಡಿ ಸಂಸ್ಕೃತದಲ್ಲಿರುವ ರಾಮಾಯಣ, ಮಹಾಭಾರತ, ಪುರಾಣಾದಿಗಳನ್ನು ಪಾಠ ಹೇಳಿಸಿದರು. ಐದಾರು ವರ್ಷಗಳಲ್ಲಿಯೇ ಏಕನಾಥ ಇವೆಲ್ಲವನ್ನೂ ಕರಗತ ಮಾಡಿಕೊಂಡನು.

ಏಕನಾಥ ಬಾಲ್ಯದಿಂದಲೇ ಏಕಾಂಗಿಯಾಗಿರುತ್ತಿದ್ದನು; ಉಳಿದ ಸಮವಯಸ್ಸಿನ ಬಾಲಕರೊಡನೆ ಒಡನಾಡುತ್ತಿರಲಿಲ್ಲ. ಬಾಲ್ಯದಿಂದಲೇ ಇವನು ಧ್ಯಾನ, ಮನನ, ಚಿಂತನದ ಹೊರತಾಗಿ ಉಳಿದ ವಿಷಯಗಳ ಕಡೆಗೆ ಗಮನವನ್ನೇ ಹರಿಸುತ್ತಿರಲಿಲ್ಲ.

ಮೃದು ಸ್ವಭಾವದ ಈ ಬಾಲಕನ ಮನಸ್ಸು ಭಕ್ತಿಮಾರ್ಗದೆಡೆಗೆ ತಿರುಗಿತು; ಕೀರ್ತನೆ, ಪ್ರವಚನಾದಿಗಳನ್ನು ಅವನು ಭಕ್ತಿಭಾವದಿಂದ ಆಲಿಸುತ್ತಿದ್ದ; ಆತ್ಮಸಾಕ್ಷಾತ್ಕಾರಕ್ಕಾಗಿ ಯೋಗ್ಯ ಸದ್ಗುರುಗಳ ದರ್ಶನ ಪಡೆಯಬೇಕೆಂಬ ತೀವ್ರ ಇಚ್ಛೆಯುಂಟಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದ. ಒಮ್ಮೆ ಶಂಕರನ ದೇವಸ್ಥಾನದಲ್ಲಿ ಧ್ಯಾನಸ್ಥನಾಗಿ ಕುಳಿತಾಗ ದೇವಗಿರಿಯ ಜನಾರ್ದನ ಸ್ವಾಮಿಗಳ ಕಡೆಗೆ ಹೋಗಿ ಅವರಿಂದ ಗುರುಮಂತ್ರ ದೀಕ್ಷೆಯನ್ನು ಪಡೆಯಬೇಕೆಂದು ಏಕನಾಥನಿಗೆ ಪ್ರೇರಣೆಯಾಯಿತು. ಮುಂದೊಂದು ದಿನ ಮನೆಯಲ್ಲಿ ಯಾರಿಗೂ ಹೇಳದೆ ಬಾಲಕ ಏಕನಾಥ ದೇವಗಿರಿಯ ಜನಾರ್ದನ ಸ್ವಾಮಿಗಳ ದರ್ಶನಕ್ಕಾಗಿ ಮನೆಬಿಟ್ಟು ಪೈಠಣದಿಂದ ಕಾಲ್ನಡಿಗೆಯಿಂದಲೇ ಹೊರಟ.

ತಮ್ಮ ಅತ್ಯಂತ ಪ್ರೀತಿಯ ಮೊಮ್ಮಗನು ಮನೆಯಿಂದ ಒಮ್ಮೆಲೇ ಕಣ್ಮರೆಯಾದದ್ದನ್ನು ಕಂಡು ಅಜ್ಜ–ಅಜ್ಜಿಯರು ಗಾಬರಿಯಾಗಿ ಎಲ್ಲಾ ಕಡೆಗಳಲ್ಲೂ ಹುಡುಕಿಸಿದರೂ ಏಕನಾಥ ಸಿಕ್ಕಲೇ ಇಲ್ಲ. ಅವರು ಕಡೆಗೆ ಹತಾಶರಾದರು.

ಇತ್ತ ದೇವಗಿರಿಯಲ್ಲಿ ತೀವ್ರ ಮುಮುಕ್ಷುತ್ವದಿಂದ ಕೂಡಿದ ತೇಜಃಪುಂಜ ವಿರಕ್ತ ಬಾಲಮೂರ್ತಿ ಏಕನಾಥ ಜನಾರ್ದನ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕರಿಸಿ, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಉಪದೇಶ ನೀಡಬೇಕೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿಕೊಂಡ. ಜನಾರ್ದನ ಸ್ವಾಮಿಗಳು ಶಿಷ್ಯನ ಯೋಗ್ಯತೆಯನ್ನು ಒಡನೆಯೇ ಅರಿತು, ಪ್ರೀತಿಯಿಂದ ಸ್ವೀಕರಿಸಿ, ತಮ್ಮ ಹತ್ತಿರವೇ ಇಟ್ಟುಕೊಂಡು ಮಂತ್ರೋಪದೇಶ ಮಾಡಿ, ಸಾಧನೆಯಲ್ಲಿ ತೊಡಗಿಸಿದರು.

ಆಗಿನ ಸಮಯದಲ್ಲಿ ಜನಾರ್ದನ ಸ್ವಾಮಿಗಳು ೪೦ ಗ್ರಾಮಗಳ ದೇಶಪಾಂಡೆಗಳಾಗಿ ದೇವಗಢ ಕೋಟೆಯ ಪ್ರಮುಖರಾಗಿದ್ದರು. ಅವರು ದೌಲತಾಬಾದದ ದರಬಾರದಲ್ಲಿ ಸರದಾರರೂ ಕೂಡ ಆಗಿದ್ದರು. ದತ್ತೋಪಾಸಕರಾದ ಜನಾರ್ದನ ಸ್ವಾಮಿಗಳಿಗೆ ಇಬ್ಬರು ಪತ್ನಿಯರಿದ್ದರು. ಯುದ್ಧದಲ್ಲಿ ಪತ್ನಿಯರೂ ಸೈನಿಕರಂತೆ ವೇಷ ಧರಿಸಿ ಕುದುರೆಯ ಮೇಲೆ ಕುಳಿತು, ಇವರ ಅಂಗರಕ್ಷಕರಾಗಿ ಯುದ್ಧ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಹೀಗೆ ಲೌಕಿಕ ವ್ಯವಹಾರವನ್ನು ಯಥಾಯೋಗ್ಯವಾಗಿ ನಿರ್ವಹಿಸಿ, ಪರಮಾರ್ಥವನ್ನು ಉತ್ತಮ ರೀತಿಯಿಂದ ಸಾಧಿಸಬಹುದೆನ್ನುವುದಕ್ಕೆ ಜನಾರ್ದನಸ್ವಾಮಿಗಳ ಚರಿತ್ರೆಯೇ ನಿದರ್ಶನವಾಗಿದೆ.

ಮಾನ್ಯ ಲೇಖಕರು ಶ್ರೀ ಸದ್ಗುರು ಸೇವಾ ಸಮಿತಿ, ಶಾಂತಿ ಕುಟೀರ, ಕನ್ನೂರ, ಬಿಜಾಪುರ ಜಿಲ್ಲೆ – ಇಲ್ಲಿನ ನಿವಾಸಿಗಳು.

## ಸದ್ಗುರು ಸೇವೆ

ಏಕನಾಥರು ಸದ್ಗುರು ಜನಾರ್ದನ ಸ್ವಾಮಿಗಳ ಸೇವೆಯನ್ನು ಅತ್ಯಂತ ತತ್ಪರತೆಯಿಂದ ಮಾಡುತ್ತಿದ್ದರು. ಗುರುವಿನ ಮೇಲಿನ ಏಕನಾಥರ ಪ್ರೇಮವು ಅವರ್ಣನೀಯ. ಗುರುಭಕ್ತಿಯ ಮಹಿಮೆಯನ್ನು ಇವರು ತಮ್ಮ ಕಾವ್ಯದಲ್ಲಿ ಬಹಳವಾಗಿ ವರ್ಣಿಸಿದ್ದಾರೆ. ಅದಲ್ಲದೆ ಅವರು "ಏಕಾ–ಜನಾರ್ದನ" ಎಂದೇ ತಮ್ಮ ಕಾವ್ಯನಾಮವನ್ನು ಇಟ್ಟುಕೊಂಡಿದ್ದರು. ಗುರುವಿನ ಪುಣ್ಯತಿಥಿಯಂದೇ ತಾವೂ ನಿರ್ಯಾಣರಾದರು. ಇದರಿಂದ ಗುರು–ಶಿಷ್ಯರ ನಡುವಣ ಸಾಮರಸ್ಯ ಎಷ್ಟೊಂದಿತ್ತೆಂಬುದು ವ್ಯಕ್ತವಾಗುತ್ತದೆ.

ಶಿಷ್ಯ ಏಕನಾಥರು ಸದ್ಗುರುಗಳ ಸೇವೆಯ ಜೊತೆಗೆ ಗುರುವಿನ ಮನೆಯ ಎಲ್ಲ ವ್ಯವಹಾರಗಳನ್ನೂ ನಿರ್ವಹಿಸುತ್ತಿದ್ದರು ಹಾಗೂ ಸಂಸ್ಥಾನದ ಲೆಕ್ಕಪತ್ರಗಳನ್ನು ಅತ್ಯಂತ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಒಮ್ಮೆ ಲೆಕ್ಕದಲ್ಲಿ ಒಂದು ಕಾಸಿನ ತಪ್ಪು ಉಂಟಾಗಿತ್ತು. ಅದನ್ನು ಹುಡುಕಿ ಸರಿಪಡಿಸಲು ಮಧ್ಯರಾತ್ರಿಯವರೆಗೆ ಎಚ್ಚರವಾಗಿದ್ದು, ಕೊನೆಗೂ ತಪ್ಪನ್ನು ಕಂಡುಹಿಡಿದು ಸಂತೋಷದಿಂದ "ಸಿಕ್ಕಿತು, ಸಿಕ್ಕಿತು" ಎಂದು ಚಪ್ಪಾಳೆ ತಟ್ಟುತ್ತ ಕುಣಿದಾಡಿದರು. ಆಗ ಜನಾರ್ದನ ಸ್ವಾಮಿಗಳಿಗೆ ಎಚ್ಚರವಾಗಿ ಶಿಷ್ಯನ ಏಕಾಗ್ರತೆ, ಕರ್ತವ್ಯನಿಷ್ಠೆಗಳನ್ನು ಕಂಡು ಆನಂದಿಸಿದರು. "ಏಕನಾಥಾ! ಇದೇ ಏಕಾಗ್ರತೆಯಿಂದ ಮನನ–ನಿದಿಧ್ಯಾಸನಗಳನ್ನು ಸಾಧಿಸಿ ನೀನು ಕೃತಕೃತ್ಯನಾಗುವೆ" ಎಂದು ಗುರುಗಳು ಆಶೀರ್ವಸಿದರು. ಅಖಂಡವಾಗಿ ೧೨ ವರ್ಷಗಳವರೆಗೆ ಏಕನಾಥರು ಹೀಗೆ ಗುರುಸೇವೆಗೈದರು.

ಒಮ್ಮೆ ಶಿಷ್ಯನ ಪರೀಕ್ಷೆಗೆಂದೇ ಒಂದು ಪ್ರಸಂಗ ಒದಗಿತು. ಜನಾರ್ದನ ಸ್ವಾಮಿಗಳು ದತ್ತಾತ್ರೇಯನ ಧ್ಯಾನದಲ್ಲಿ ಮಗ್ನರಾಗಿ ಸಮಾಧಿಸ್ಥಿತಿಯಲ್ಲಿದ್ದಾಗ, ಪರಕೀಯರು ದಂಡೆತ್ತಿ ಬಂದ ಸುದ್ದಿಯು ಅನುಚರರಿಂದ ತಿಳಿಯಿತು. ಆಗ ಏಕನಾಥರು ಗುರುವಿನ ಸಮಾಧಿಗೆ ಭಂಗಬಾರದಂತೆ ತಾವೇ ಸರದಾರನ ಉಡುಪನ್ನು ಧರಿಸಿ ಸೈನಿಕರಿಗೆಲ್ಲ ಸ್ಫೂರ್ತಿಯನ್ನು ತುಂಬಿ ವೀರಾವೇಶದಿಂದ ಕಾದು, ವೈರಿಗಳನ್ನು ಪರಾಭವಗೊಳಿಸಿ, ಮರಳಿ ಬಂದರು; ಗುರುಗಳು ಬಾಹ್ಯಪ್ರಜ್ಞೆಗೆ ಬಂದ ನಂತರ ನಡೆದ ಘಟನೆಯನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿದರು. ಶಿಷ್ಯನ ಸಮಯೋಚಿತ ಕಾರ್ಯನಿರ್ವಹಣೆಯನ್ನು ಕಂಡು ಜನಾರ್ದನ ಸ್ವಾಮಿಗಳು ಸುಪ್ರೀತರಾದರು.

ಶಿಷ್ಯನ ಅನನ್ಯ ಭಕ್ತಿಗೆ ಮೆಚ್ಚಿ ಗುರುಗಳು ತಾವು ಸಾಧನೆಗಾಗಿ ಹೋಗುತ್ತಿದ್ದ ಗಾಢವಾದ ಅರಣ್ಯಕ್ಕೆ ಏಕನಾಥರನ್ನೂ ಕರೆದುಕೊಂಡು ಹೋದರು. ಅಲ್ಲಿ ಏಕನಾಥರಿಗೆ ದತ್ತಾತ್ರೇಯ ಸ್ವಾಮಿಯ ದರ್ಶನ ಹಾಗೂ ಅನುಗ್ರಹವನ್ನುಂಟುಮಾಡಿಸಿದರು. ಹೀಗೆ ಸದ್ಗುರುಗಳಿಂದ ಪೂರ್ಣಜ್ಞಾನ ಪಡೆದ ನಂತರ, ಗುರುಗಳು ಏಕನಾಥರಿಗೆ ತೀರ್ಥಯಾತ್ರೆಗೆ ಹೊರಡಲು ಆದೇಶವನ್ನಿತ್ತರು.

## ತೀರ್ಥಯಾತ್ರೆ ಹಾಗೂ ಮರಳಿ ಮನೆಗೆ

ಇತ್ತ ಪೈಠಣದಲ್ಲಿ ಬಾಲಕ ಏಕನಾಥನ ಅಗಲಿಕೆಯಿಂದ ಅಜ್ಜ–ಅಜ್ಜಿಯರು ದುಃಖಿಗಳಾಗಿದ್ದರು. ಮೊಮ್ಮಗನು ಯಾವ ಕಡೆಗೆ ಹೋದನೆಂಬುದೂ ಅವರಿಗೆ ತಿಳಿಯಲಿಲ್ಲ. ಏಕನಾಥರು ತಮ್ಮ ಮನೆಯಲ್ಲಿದ್ದಾಗ, ಪುರಾಣ ಹೇಳಲು ಬರುತ್ತಿದ್ದ ಪುರಾಣಿಕರಿಗೆ ಒಮ್ಮೆ ತಾವು ಜನಾರ್ದನ ಸ್ವಾಮಿಗಳ ಕಡೆಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಈ ಸುಳಿವನ್ನು ಆಧರಿಸಿ ಪುರಾಣಿಕರು ಏಕನಾಥರನ್ನು ಹುಡುಕಲು ದೇವಗಢದ ಹಾದಿ ಹಿಡಿದು, ಜನಾರ್ದನ ಸ್ವಾಮಿಗಳ ಬಳಿ ಬಂದರು. ಗುರುಗಳ ದರ್ಶನವನ್ನು ಮಾಡಿ, ಏಕನಾಥರ ಅಜ್ಜ –ಅಜ್ಜಿಯರ ವ್ಯಥೆಯನ್ನು ನಿವೇದಿಸಿದರು. ಅದಲ್ಲದೆ ಏಕನಾಥರನ್ನು ಮನೆಗೆ ಮರಳಿ ಕಳಿಸಲು ಪ್ರಾರ್ಥಿಸಿದರು. ಜನಾರ್ದನ ಸ್ವಾಮಿಗಳು ಏಕನಾಥನ ಯೋಗ್ಯತೆ ಹಾಗೂ ಭವ್ಯ ಅವತಾರ ಕಾರ್ಯದ ಬಗ್ಗೆ ಆ ಪುರಾಣಿಕರಿಗೆ ತಿಳಿಸಿ ಹೇಳಿದರು. ಆದರೂ ವೃದ್ಧ ದಂಪತಿಗಳ ಮೇಲೆ ಕರುಣೆ ಉಂಟಾಗಿ, ತಮ್ಮ ಪರಮಪ್ರಿಯ ಶಿಷ್ಯನಿಗೆ ಪೈಠಣದಲ್ಲಿಯೇ ಇದ್ದು ಗೃಹಸ್ಥಾಶ್ರಮವನ್ನು ಸ್ವೀಕರಿಸಲು ಆಜ್ಞಾಪತ್ರವನ್ನು ಆ ಪುರಾಣಿಕರ ಕೈಗೆ ಕೊಟ್ಟರು. ತೀರ್ಥಯಾತ್ರೆಯಿಂದ ಬಂದ ನಂತರ ಏಕನಾಥರಿಗೆ ಅದನ್ನು ಕೊಡಲು ಹೇಳಿದರು.

ಶ್ರೀಸದ್ಗುರುಗಳ ಆದೇಶದ ಮೇರೆಗೆ ತೀರ್ಥಯಾತ್ರೆಯನ್ನು ಮಾಡುತ್ತಿರುವಾಗ ಏಕನಾಥರಿಗೆ ದಾರಿಯಲ್ಲಿ ಚಂದ್ರಭಟ್ಟರೆಂಬ ಮಹಾನ್ ಪಂಡಿತರ ಭೇಟಿಯಾಯಿತು. ಪಂಚವಟಿಯವರೆಗೆ (ನಾಸಿಕ) ಜನಾರ್ದನ ಸ್ವಾಮಿಗಳು ಹಾಗೂ ಚಂದ್ರಭಟ್ಟರಿಬ್ಬರೂ ಏಕನಾಥರ ಜೊತೆಗಿದ್ದರು. ನಾಸಿಕದಲ್ಲಿ, ಭಗವಾನ್ ಶ್ರೀರಾಮನ ಸನ್ನಿಧಿಯಲ್ಲಿ ಚತುಃಶ್ಲೋಕೀ ಭಾಗವತದ ಮೇಲೆ ಭಾಷ್ಯ ಬರೆಯಲು ಏಕನಾಥರಿಗೆ ಗುರುಗಳು ಆಣತಿ ಮಾಡಿದರು. ಗುರ್ವಾಜ್ಞೆಯ ಪ್ರಕಾರ ನಾಸಿಕದ ವಾಸ್ತವ್ಯದಲ್ಲಿಯೇ ಭಾಗವತದ ಮೇಲಿನ ಟಿಪ್ಪಣಿಯ ಕಾರ್ಯವನ್ನು ಏಕನಾಥರು ಪೂರ್ಣಗೊಳಿಸಿದರು. ಏಕನಾಥರ ಪ್ರತಿಭೆಯಿಂದ ಹೊರಹೊಮ್ಮಿದ, ವ್ಯಾಕರಣಶುದ್ಧವೂ ತರ್ಕಬದ್ಧವೂ ಆದ ಈ ಪ್ರೌಢವಾಙ್ಮಯವನ್ನು ಕಂಡು ಸದ್ಗುರುಗಳಿಗೆ ಸಂತೋಷವಾಯಿತು. ತಾವು ದೇವಗಿರಿಗೆ ಮರಳಿದರು. ಹೋದಲ್ಲೆಲ್ಲಾ ಭಜನೆ, ಕೀರ್ತನೆಗಳಿಂದ ಸಾವಿರಾರು ಜನರನ್ನು ಏಕನಾಥರು ಮಂತ್ರಮುಗ್ಧಗೊಳಿಸುತ್ತಿದ್ದರು. ಅವರು ಉತ್ತರ ಭಾರತದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಮರಳಿ ಪೈಠಣಕ್ಕೆ ಬಂದರು.

ಅಜ್ಜ ಚಕ್ರಪಾಣಿಯು ಏಕನಾಥರನ್ನು ಗುರುತಿಸಿ, ಜನಾರ್ದನ ಸ್ವಾಮಿಗಳ ಆಜ್ಞಾಪತ್ರವನ್ನು ಕೊಡಲು, ಗುರುಗಳ ಹಸ್ತಾಕ್ಷರವುಳ್ಳ ಆ ಪತ್ರಕ್ಕೆ ನಮಸ್ಕರಿಸಿ ಓದಿ, ಅವರ ಆಜ್ಞೆಯಂತೆ ಮುಂದೆ ಮನೆಯಲ್ಲಿಯೇ ಇರಲು ಆರಂಭಿಸಿದರು. ಮುಂದೆ ಪೈಠಣದಲ್ಲಿ ಲೋಕೋದ್ಧಾರಕ್ಕಾಗಿ ಕೃಷ್ಣ ಜಯಂತಿಯ ಉತ್ಸವವನ್ನು ಪ್ರಾರಂಭಿಸಿದರು. ಏಕನಾಥರ ಸಾಧುತ್ವ ಹಾಗೂ ಕೀರ್ತನ ಶೈಲಿಯ ಕೀರ್ತಿಯ ಸುಗಂಧವು ಊರಿಂದೂರಿಗೆ ಹರಡುತ್ತ

ಸಾಗಿ, ದೇವಗಿರಿಯ ಜನಾರ್ದನಸ್ವಾಮಿಗಳ ಕಿವಿಗೂ ತಲುಪಿತು. ಶಿಷ್ಯನು ಭಗವದ್ಭಕ್ತಿಯನ್ನು ಪ್ರಸಾರ ಮಾಡುತ್ತಿದ್ದುದನ್ನು ಕೇಳಿ, ಅತೀವ ಸಂತುಷ್ಟರಾದ ಅವರಿಗೆ ಅವನನ್ನು ತಾವೂ ಒಮ್ಮೆ ಪ್ರತ್ಯಕ್ಷ ನೋಡಬೇಕೆಂಬ ಉತ್ಕಟೇಚ್ಛೆಯುಂಟಾಯಿತು. ಜನಾರ್ದನ ಸ್ವಾಮಿಗಳು ಕೃಷ್ಣ ಜನ್ಮಾಷ್ಟಮಿಯ ಉತ್ಸವಕ್ಕೆಂದು ತಮ್ಮ ಪರಿವಾರ ಸಮೇತವಾಗಿ ಪೈಠಣಕ್ಕೆ ಬಂದೇಬಿಟ್ಟರು.

ಜನಾರ್ದನ ಸ್ವಾಮಿಗಳು ಬಂದರೆಂಬ ಸುದ್ದಿಯು ಕಿವಿಯ ಮೇಲೆ ಬೀಳುವುದೇ ತಡ, ಏಕನಾಥರಿಗೆ ಪರಮಾನಂದವುಂಟಾಗಿ, ಓಡುತ್ತ ಬಂದು ಪ್ರೇಮಾತಿಶಯದಿಂದ ಸದ್ಗುರುಗಳಡಿಗಳಲ್ಲಿ ಶಿರಸಾಷ್ಟಾಂಗ ನಮಸ್ಕರಿಸಿದರು. ಸ್ವಾಮಿಗಳಾದರೂ ಏಕನಾಥರನ್ನು ಮೇಲಕ್ಕೆತ್ತಿ ಆಲಿಂಗಿಸಿದರು; "ಧನ್ಯ ಧನ್ಯ ಏಕನಾಥ" ಎಂದು ಧನ್ಯೋದ್ಗಾರ ತೆಗೆದರು! ಸ್ವಾಮಿಗಳ ಆಗಮನದಿಂದ ಏಕನಾಥ ರಿಗೂ ಕೃತಕೃತ್ಯತೆಯ ಭಾವ ಆವರಿಸಿತು.

ಮುಂದೆ ಚಕ್ರಪಾಣಿಯು ಕರ್ನಾಟಕದ ವಿಜಾಪುರದ ಕುಲೀನ ಬ್ರಾಹ್ಮಣ ಕನ್ಯೆಯಾದ ಗಿರಿಜಾಬಾಯಿಯನ್ನು ಏಕನಾಥರಿಗೆ ಪತ್ನಿಯನ್ನಾಗಿ ನಿಶ್ಚಯಿಸಿ, ಒಂದು ಶುಭ ಮುಹೂರ್ತದಲ್ಲಿ ಅತಿ ವಿಜೃಂಭಣೆಯಿಂದ ಲಗ್ನವನ್ನು ಮಾಡಿದರು. ಏಕನಾಥರು ತೋರಿಕೆಗೆ ಸಂಸಾರಿಗಳಾಗಿದ್ದರೂ ಅಂತರಂಗದಲ್ಲಿ ನಿರಾಸಕ್ತ ಬುದ್ಧಿಯವರಾಗಿದ್ದರಿಂದ, ಗೃಹಸ್ಥಾಶ್ರಮದ ಬಂಧನ ಅವರಿಗಾಗ ಲಿಲ್ಲ. ಏಕನಾಥರ ಲಗ್ನದ ನಂತರ ಅವರಿಗೆ ಉದ್ಧವನೆಂಬ ಒಳ್ಳೆಯ ಶಿಷ್ಯನು ದೊರೆತನು. ಅವನು ಕೊನೆವರೆಗೂ ಅವರ ಜೊತೆ ಯಲ್ಲಿಯೇ ಇದ್ದನು. ಕೆಲವೇ ದಿನಗಳ ಅಂತರದಲ್ಲಿ ಏಕನಾಥರ ಅಜ್ಜ-ಅಜ್ಜಿಯರಿಬ್ಬರೂ ಸ್ವರ್ಗವಾಸಿಗಳಾದರು.

ಗಿರಿಜಾಬಾಯಿಯು ವಯಸ್ಸಿನಿಂದ ಚಿಕ್ಕವಳಾಗಿದ್ದರೂ ಮನೆಯ ಚುಕ್ಕಾಣಿಯನ್ನು ಹಿಡಿದು, ಪತಿಯ ಮನದಾಳದ ಆಶೆಯಂತೆ ನಡೆದುಕೊಳ್ಳುತ್ತಿದ್ದಳು. ದೀನರು, ದಲಿತರು, ಅನಾಥರು - ಇವರೆಲ್ಲರಿಗೂ ಏಕನಾಥರ ಮನೆಯೇ ಅನ್ನ-ವಸತಿಗಳಿಗೆ ಆಶ್ರಯಸ್ಥಾನವಾಗಿತ್ತು. ಶಾಂತಿ, ದಯೆ ಮುಂತಾದ ಗುಣಗಳಿಂದ, ಪತಿಯ ಕಾರ್ಯದಲ್ಲಿ ಅನುರೂಪಳಾಗಿ ಎಂದಿಗೂ ಬೇಸರಿಸದೆ ಗಿರಿಜಾಬಾಯಿ ಕಾರ್ಯ ನಿರ್ವಹಿಸುತ್ತಿದ್ದಳು. ಶಿಷ್ಯನಾದ ಉದ್ಧವನು ಹೊರಗಿನ ಕೆಲಸಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿದ್ದನು. ಹೀಗಾಗಿ ಏಕನಾಥರಿಗೆ ಎಂದಿಗೂ ಯಾವುದೇ ತರದ ಕೊರತೆಯಿರಲಿಲ್ಲ.

ಇದರಿಂದ ಏಕನಾಥರಿಗೆ ಪ್ರಪಂಚದ ಕಡೆಗೆ ಲಕ್ಷ್ಯಕೊಡುವ ಆವಶ್ಯಕತೆ ಬೀಳುತ್ತಿರಲಿಲ್ಲ. ಗೋಕುಲಾಷ್ಟಮಿಯ ಉತ್ಸವವು ಪ್ರತಿ ವರ್ಷ ಅತ್ಯಂತ ವಿಜೃಂಭಣೆಯಿಂದ ಜರುಗುತ್ತಿತ್ತು. ಸಮಾಜದ ಎಲ್ಲಾ ಜಾತಿ, ಮತ, ಪಂಥದವರು ಇವರ ಕೀರ್ತನೆ ಪ್ರವಚನ ಗಳನ್ನು ಕೇಳಿ ಮಂತ್ರಮುಗ್ಧರಾಗುತ್ತಿದ್ದರು. ಉದ್ಧವನ ವಿನಂತಿಯ ಮೇರೆಗೆ ಏಕನಾಥರು ಭಾಗವತ ಪ್ರವಚನವನ್ನು ಮಾಡಿದರು. ಅದರ ಹನ್ನೊಂದನೆಯ ಸ್ಕಂಧದ ಮೇಲೆ ಭಾಷ್ಯವನ್ನೂ ಬರೆದರು.

ಏಕನಾಥರ ಸರ್ವಾಂಗೀಣ ಉತ್ಕರ್ಷವನ್ನು ಕಂಡು ಕೆಲವು ನಿಂದಕರು ಟೀಕೆ ಮಾಡುತ್ತಿದ್ದರು. ಆದರೆ ಇವರಲ್ಲಿರುವ ಅಲೌಕಿಕ ಸದ್ಗುಣಗಳಾದ ಸಹಿಷ್ಣುತೆ, ಸಮತ್ವ ಮುಂತಾದವುಗಳ ಮುಂದೆ ಅವರದೇನೂ ಆಟ ನಡೆಯದೆ ಅವರೂ ಶರಣಾಗತರಾದರು. "ನಿಂದಕರೇ ನಮ್ಮ ಕಾಶಿ! ಅವರೆಮ್ಮ ಪಾಪಗಳನ್ನು ನಾಶಮಾಡುವ ರಯ್ಯ!" ಎಂದು ಏಕನಾಥರೇ ಒಂದುಕಡೆ ಉದ್ಗರಿಸಿದ್ದಾರೆ!

## ವಿಠ್ಠಲ-ರುಕ್ಮಿಣಿಯ ಮೂರ್ತಿಯ ಪ್ರತಿಷ್ಠಾಪನೆ

ಕರ್ನಾಟಕದ ಶ್ರೀಮಂತನೊಬ್ಬನು ವಿಠ್ಠಲ-ರುಕ್ಮಿಣಿಯರ ಸುಂದರವಾದ ಮೂರ್ತಿಯನ್ನು, ಉತ್ತಮ ಶಿಲ್ಪಿಗಳಿಂದ ಸಿದ್ಧಪಡಿಸಿ ತನ್ನ ಊರಲ್ಲಿ ಸ್ಥಾಪಿಸುವುದರಲ್ಲಿದ್ದನು. ಅಷ್ಟರಲ್ಲಿ ಅವನಿಗೆ, ಬಿಡದೆ ಮೂರು ದಿವಸಗಳ ಕಾಲ ಸತತವಾಗಿ, " ಈ ಮೂರ್ತಿಯನ್ನು ಪೈಠಣದ ಏಕನಾಥರಿಗೆ ಸಮರ್ಪಿಸು" ಎಂದು ಸ್ವಪ್ನವಾಯಿತು. ಅದರಂತೆ ಆ ಸಾಹುಕಾರನು ಪೈಠಣಕ್ಕೆ ಹೋಗಿ ಮೂರ್ತಿಯನ್ನು ಏಕನಾಥರಿಗೆ ಸಮರ್ಪಿಸಿದನು. ಏಕನಾಥರು ಈ ಮೂರ್ತಿಯನ್ನು ಸಂತೋಷದಿಂದ ಸ್ವೀಕರಿಸಿ, ಒಳ್ಳೆಯ ಶುಭ ಪರ್ವದಂದು ತಮ್ಮ ಮನೆಯಲ್ಲಿಯೇ ಪ್ರತಿಷ್ಠಾಪಿಸಿದರು.

ಏಕನಾಥರು ಎಲ್ಲಾ ಪ್ರಾಣಿಗಳಲ್ಲೂ ಭಗವಂತನನ್ನು ನೋಡುವ ಪಾಠವನ್ನು ಭಕ್ತರಿಗೆ ಕಲಿಸಿದರು ಹಾಗೂ ಅದರಂತೆ ತಾವೂ ವರ್ತಿಸಿ ತೋರಿಸಿದರು. ಒಮ್ಮೆ ಏಕನಾಥರು ಕಾಶಿಯಿಂದ ಗಂಗಾ ಜಲದ ಪಾತ್ರೆಯನ್ನು ತೆಗೆದುಕೊಂಡು, ರಾಮೇಶ್ವರದ ಕಡೆಗೆ ಹೊರಡುವಾಗ ಮಾರ್ಗಮಧ್ಯದಲ್ಲಿ ಬೇಸಿಗೆಯ ಬಿಸಿಲಿ ನಿಂದ ನೀರಿಗಾಗಿ ಚಡಪಡಿಸುತ್ತಿರುವ ಕತ್ತೆಯನ್ನು ಕಂಡರು. ಕರುಣೆ ಉಂಟಾಗಿ ತಾವು ತಂದಿರುವ ಗಂಗಾಜಲವನ್ನು ಆ ಕತ್ತೆಗೆ ಕುಡಿಸಿ ಅದರ ಬಾಯಾರಿಕೆಯನ್ನು ಇಂಗಿಸಿದರು. ಒಮ್ಮೆ ಮನೆಯಲ್ಲಿ ಶ್ರಾದ್ಧದ ಅಡಿಗೆಯು ಸಿದ್ಧವಾಗಿತ್ತು; ಅದನ್ನು ಹಸಿವೆ ಯಿಂದ ಕಂಗೆಟ್ಟಿದ್ದ ಕೆಲವು ಹರಿಜನರಿಗೆ ಮೊದಲು ಪಂಕ್ತಿಯಲ್ಲಿ ಉಣಬಡಿಸಿದರು.

ಏಕನಾಥರು ಶಾಂತಿಯ ಆಗರವೇ ಆಗಿದ್ದರು. ಅವರೆಂದಿಗೂ ಶಾಂತಿಯಿಂದ ವಿಚಲಿತರಾಗಲಿಲ್ಲವೆಂಬುದಕ್ಕೆ ಅನೇಕ ಪ್ರಸಂಗಗಳು ಅವರ ಚರಿತ್ರೆಯಲ್ಲಿ ಕಂಡುಬರುತ್ತವೆ. ಒಮ್ಮೆ ಏಕನಾಥರಿಗೆ ಸಿಟ್ಟು ಬರಿಸುವುದಕ್ಕಾಗಿ ಕೆಲವು ಕುಟಿಲ ಜನರು ಒಂದು ಯೋಜನೆ ಹಾಕಿದರು. ಅದರ ಪ್ರಕಾರ ಒಂದು ದಿನ ಏಕನಾಥರು ನದಿಯಿಂದ ಸ್ನಾನಮಾಡಿ ಮನೆಗೆ ಹೋಗುವಾಗ ಒಬ್ಬ ಮುಸಲ್ಮಾನನು ಅವರ ಮೈಮೇಲೆ ಉಗುಳಿದನು. ಏಕನಾಥರು ಸಿಟ್ಟಾಗದೆ, ಮರಳಿ ನದಿಯಲ್ಲಿ ಮಿಂದು ಮಡಿಯಾಗಿ ಮನೆಯ ಕಡೆಗೆ ಹೋದರು. ಪುನಃ ಆ ಮುಸಲ್ಮಾನನು ಏಕನಾಥರ ಮೇಲೆ ಉಗುಳಿ ಮೈಲಿಗೆ ಮಾಡಿದನು. ಹೀಗೆ ನೂರು ಸಾರಿ ಉಗುಳಿದರೂ ಏಕನಾಥರು ಕೋಪಗೊಳ್ಳದೆ ಮತ್ತೆ ಮತ್ತೆ ನದಿಯಲ್ಲಿ ಸ್ನಾನಮಾಡಿ ಬರುತ್ತಿದ್ದರು. ಕೊನೆಯಲ್ಲಿ ಆ ಮುಸಲ್ಮಾನನೇ ಪಶ್ಚಾತ್ತಾಪಗೊಂಡು ಏಕನಾಥರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ತನ್ನ ತಪ್ಪನ್ನು ಕ್ಷಮಿಸಲು

ಪ್ರಾರ್ಥಿಸಿದನು. ಆಗ ಏಕನಾಥರು "ಅಪ್ಪಾ! ನಿನ್ನ ದೆಸೆಯಿಂದ ನನಗೆ ಇಂದು ೧೦೧ ಸಾರಿ ಗಂಗಾಸ್ನಾನ ಮಾಡಿದ ಪುಣ್ಯ ಲಭಿಸಿತು" ಎಂದು ಉದ್ಗರಿಸಿದರು!

## ಗ್ರಂಥರಚನೆ

ಏಕನಾಥ ಮಹಾರಾಜರ ಗ್ರಂಥಸಂಪತ್ತು ಅಪಾರವಾಗಿದೆ. ಅವರಿಗಿಂತ ೩೦೦ ವರ್ಷಗಳ ಹಿಂದೆ ಸಂತ ಜ್ಞಾನೇಶ್ವರ ಮಹಾರಾಜರು ಭಗವದ್ಗೀತೆಯ ಮೇಲೆ ಭಾಷ್ಯವನ್ನು ಬರೆದರು. ಅದು 'ಜ್ಞಾನೇಶ್ವರೀ' ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಕಾಲಾಂತರದಲ್ಲಿ ಅದಕ್ಕೆ ಅನೇಕ ಅಶುದ್ಧ ಪಾಠಗಳು ಸೇರಿದ್ದರಿಂದ, ವ್ಯಾಕರಣ ದೃಷ್ಟಿಯಿಂದಲೂ ಬಹಳಷ್ಟು ತಪ್ಪುಗಳು ಇದ್ದವು. ಏಕನಾಥರು ಜ್ಞಾನೇಶ್ವರೀ ಗ್ರಂಥದ ಸಂಶೋಧನೆ ಮಾಡಿ ಅದರ ಶುದ್ಧಪ್ರತಿಯನ್ನು ಸಿದ್ಧಗೊಳಿಸಿ, ವಾರಕರಿ ಸಂಪ್ರದಾಯವನ್ನು ಪ್ರಚಾರಕ್ಕೆ ತಂದರು; ಆಳಂದಿಯ ಇಂದ್ರಾಯಣೀ ತೀರದಲ್ಲಿ ಇರುವ ಜ್ಞಾನೇಶ್ವರ ಮಹಾರಾಜರ ಸಮಾಧಿ ಸ್ಥಳವನ್ನು ಶೋಧಿಸಿ, ಜೀರ್ಣೋದ್ಧಾರ ಮಾಡಿದರು.

ಚತುಃಶ್ಲೋಕೀ ಭಾಗವತದ ನಂತರ ಹಸ್ತಾಮಲಕ ಟೀಕೆ, ಸ್ವಾತ್ಮಬೋಧ, ಚಿರಂಜೀವಪದ, ಆನಂದಲಹರಿ, ಅನುಭವಾನಂದ, ಮುದ್ರಾವಿಲಾಸ, ಲಘುಶೀಲಾ ಇತ್ಯಾದಿ ಸಣ್ಣ-ದೊಡ್ಡ ಗ್ರಂಥಗಳನ್ನು ಪೈಠಣದಲ್ಲಿರುವಾಗ ಏಕನಾಥರು ರಚಿಸಿದರು. ಇವೆಲ್ಲವೂ ಅದ್ವೈತತತ್ತ್ವಪ್ರಧಾನವಾಗಿದ್ದು, ಅವುಗಳಲ್ಲಿರುವ ಪ್ರತಿಪಾದನ ಶೈಲಿ ಚಿತ್ತಾಕರ್ಷಕವಾಗಿದೆ. ಅದಲ್ಲದೆ ಏಕನಾಥ ಮಹಾರಾಜರು ಅನೇಕ ಅಭಂಗ ಮತ್ತು ಪದ್ಯಗಳನ್ನು ರಚಿಸಿ ಜನಪ್ರಿಯಗೊಳಿಸಿದರು.

ಇಷ್ಟಲ್ಲದೆ, ಅವರು ಭಾಗವತದ ೧೧ನೇ ಸ್ಕಂಧದ ಮೇಲೆ ಭಾಷ್ಯ ಬರೆದರು. ಇದು ಮರಾಠಿಯಲ್ಲಿದ್ದು ಮಹಾನ್ ಗ್ರಂಥವಾಗಿದೆ. ಇದರಲ್ಲಿ ಒಟ್ಟು ೩೧ ಅಧ್ಯಾಯಗಳಿದ್ದು ೧೮,೩೯೮ ಓವಿ (ನುಡಿ)ಗಳಿವೆ. ಇದನ್ನು ಏಕನಾಥರು ಪೈಠಣದಲ್ಲಿ ಪ್ರಾರಂಭಿಸಿ ಕಾಶಿಯಲ್ಲಿ ಪೂರ್ಣಗೊಳಿಸಿದರು. ಕಾಶಿಯ ಸಂಸ್ಕೃತ ಪಂಡಿತರಿಗೆ ಈ ಗ್ರಂಥದ ಮಹಿಮೆಯ ಅರಿವಾಯಿತು. ಅವರು ಈ ಗ್ರಂಥರಾಜವನ್ನು ಆನೆಯ ಮೇಲೆ ಇಟ್ಟು ಮೆರವಣಿಗೆ ಮಾಡಿದರು.

'ರುಕ್ಮಿಣೀ ಸ್ವಯಂವರ'-ಇದು ೧೭೦೦ ಓವಿಗಳನ್ನು (ನುಡಿ) ಹೊಂದಿದೆ. 'ಭಾವಾರ್ಥ ರಾಮಾಯಣ'- ಇದು ಮರಾಠಿ ಗ್ರಂಥವಾಗಿದ್ದು ಭಕ್ತಿರಸಪ್ರಧಾನವಾಗಿದೆ. ಇದರ ೪೪ ಅಧ್ಯಾಯಗಳನ್ನು ಏಕನಾಥರು ರಚಿಸಿದರು; ಉಳಿದ ಭಾಗವನ್ನು ಅವರ ನಿರ್ಯಾಣದ ನಂತರ ಅವರ ಶಿಷ್ಯ ಗಾವಬಾ ರಚಿಸಿ ಪೂರ್ಣಗೊಳಿಸಿದನು. ಒಟ್ಟು ೪೦೦೦೦ ಓವಿಗಳು ಇರುವ ಈ ಗ್ರಂಥದ ಮೂಲಕ ವಾಙ್ಮಯ ಸೇವೆಯನ್ನು ಏಕನಾಥರು ಅವ್ಯಾಹತವಾಗಿ ಸಲ್ಲಿಸಿ, ಮರಾಠಿ ಭಾಷಿಕರಿಗೆ ಭಕ್ತಿಜ್ಞಾನಾಮೃತವನ್ನುಣಿಸಿ ಸಂತೃಪ್ತರನ್ನಾಗಿ ಮಾಡಿದರು; ಆ ಮೂಲಕ ಮರಾಠಿ ಭಾಷೆಯ ವೈಭವವನ್ನು ಹೆಚ್ಚಿಸಿದರು.

ಏಕನಾಥರಿಗೆ ಗೋದಾವರಿ, ಗಂಗಾ ಎಂಬ ಇಬ್ಬರು ಪುತ್ರಿಯರು, ಹರಿಪಂತನೆಂಬ ಒಬ್ಬನೇ ಪುತ್ರನು ಇದ್ದನು. ಹರಿಪಂತನು ಮಹಾನ್ ವಿದ್ವಾಂಸನೂ, ಸಂಸ್ಕೃತ ಭಾಷೆಯ ಅಭಿಮಾನಿಯೂ ಆಗಿದ್ದನು. ತನ್ನ ತಂದೆಯು ಮರಾಠಿ ಭಾಷೆಯಲ್ಲಿ ಗ್ರಂಥ ರಚಿಸುವುದಲ್ಲದೆ ಪ್ರವಚನ, ಕೀರ್ತನೆಗಳನ್ನು ಮಾಡುತ್ತಿದ್ದುದು ಅವನಿಗೆ ಸೇರುತ್ತಿರಲಿಲ್ಲ. ಕೊನೆಗೆ ಏಕನಾಥರ ಮೇಲೆ ಸಿಟ್ಟಾಗಿ ತನ್ನ ಒಬ್ಬ ಮಗನನ್ನು ಏಕನಾಥರ ಬಳಿಗೆ ಬಿಟ್ಟು, ಕುಟುಂಬ ಸಮೇತವಾಗಿ ಕಾಶಿಯಲ್ಲಿ ನೆಲೆಸಿದನು. ಇದನ್ನು ಏಕನಾಥರಿಗೆ ಸಹಿಸಲಿಕ್ಕಾಗಲಿಲ್ಲ. ಏಕನಾಥರು ತಾವೇ ಮಗನಿಗೆ ತಿಳಿಹೇಳಿ ಮರಳಿ ಕರೆತರಲು ಕಾಶಿಗೆ ಹೋದರು. ಆಗ ಮಗನ ಹೇಳಿಕೆಯ ಪ್ರಕಾರ, "ಮರಾಠಿ ಭಾಷೆಯಲ್ಲಿ ಪುರಾಣ ಹೇಳಬಾರದು, ಪರಾನ್ನ ಸ್ವೀಕರಿಸಬಾರದು" ಎಂಬ ಕರಾರುಗಳಿಗೆ ಒಪ್ಪಿಕೊಂಡು, ಮರಳಿ ಪೈಠಣಕ್ಕೆ ಮಗನನ್ನು ಕರೆತಂದರು. ಹೀಗೆ ಮಗನೊಡನೆ ವಿಶ್ವಾಸ ಉಂಟಾಗಿ ಕೆಲವು ದಿನಗಳು ಕಳೆದ ಮೇಲೆ, ೧೫೯೯ನೇ ಇಸವಿ, ಫಾಲ್ಗುಣ ಕೃಷ್ಣಪಕ್ಷ ಷಷ್ಠಿಯಂದು ತಮ್ಮ ಸದ್ಗುರುಗಳ ಪುಣ್ಯತಿಥಿಯ ದಿನವೇ ಜಲಸಮಾಧಿ ಹೊಂದಿದರು. ಏಕನಾಥರ ಸಮಾಧಿಯು ಪೈಠಣದಲ್ಲಿ ನದಿಯ ದಡದಲ್ಲಿಯೇ ಇದೆ. ನಾಥ ಷಷ್ಠಿಯಂದು ಅಲ್ಲಿ ಬಹಳ ದೊಡ್ಡ ಉತ್ಸವವಾಗುವುದು.

ಹೀಗೆ ೭೧ ವರ್ಷಗಳ ಕಾಲಾವಧಿಯಲ್ಲಿ ಪೈಠಣ ಕ್ಷೇತ್ರದಲ್ಲಿ ಹರಿಭಕ್ತಿ - ಗುರುಭಕ್ತಿಗಳನ್ನು ಬೆಳೆಸಿ ಭೂಲೋಕದ ದೈನ್ಯತೆಯನ್ನು ದೂರೀಕರಿಸಿದ ಸಚ್ಚಿದಾನಂದ ಸ್ವರೂಪರಾದಂಥ ಏಕನಾಥ ಮಹಾರಾಜರಿಗೆ ನಮ್ಮ ನೂರಾರು ಪ್ರಣಾಮಗಳು!

### ಓದುಗರ ವೇದಿಕೆ

**ನಿತ್ಯಜೀವನದಲ್ಲಿ ಆಧ್ಯಾತ್ಮಿಕತೆ**

ನಮ್ಮ ದಿನನಿತ್ಯದ ಜೀವನದಲ್ಲಿ ನೈತಿಕತೆ, ಧರ್ಮ ಮತ್ತು ಅಧ್ಯಾತ್ಮಗಳನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯ, ಅನುಭವಗಳನ್ನು ನಿಮ್ಮ ಸಹ ಓದುಗರ ಜೊತೆಗೆ ಹಂಚಿಕೊಳ್ಳಿ. ಧ್ಯಾನ, ಪ್ರಾರ್ಥನೆ, ಪೂಜೆ, ಆಧ್ಯಾತ್ಮಿಕ ಗ್ರಂಥಗಳ ಪಠಣ, ನೀತಿವಂತ ಬಾಳುವೆ, ಸದಾಚಾರ - ಇವುಗಳ ಅಭ್ಯಾಸವು ನಮ್ಮ ಬಾಳಿಗೆ ಹೇಗೆ ಸುಖ, ಶಾಂತಿ, ನೆಮ್ಮದಿಗಳನ್ನು ನೀಡಬಲ್ಲುದು? ಇವುಗಳ ಅಭ್ಯಾಸದಲ್ಲಿ ನಿಮ್ಮ ಅನುಭವ ಏನು? - ಇದರ ಬಗ್ಗೆ ೩೦೦ ಪದಗಳಿಗೆ ಮೀರದಂತೆ ನಮಗೆ ಬರೆದು ಕಳಿಸಿ. ದಯವಿಟ್ಟು ಪವಾಡಗಳನ್ನು, ಅತೀಂದ್ರಿಯವೆಂಬಂತಹ ಸಂಗತಿಗಳನ್ನು ಬರೆಯಬೇಡಿ. ಬರಹಗಳು ತಲುಪಬೇಕಾದ ಕಡೆಯ ದಿನಾಂಕ: ೧-೭-೨೦೦೯. ಉತ್ತಮ ಬರಹಗಳನ್ನು ಪತ್ರಿಕೆಯ 'ಓದುಗರ ವೇದಿಕೆ' ಅಂಕಣದಲ್ಲಿ ಪ್ರಕಟಿಸಲಾಗುವುದು.

**- ಸಂ.**